ಏನು ಹೇಳಿದ್ದಾರೋ, ಅದರ ಹಿನ್ನಲೆಯಲ್ಲಿ ನಾವೂ ಕೂಡ ಇವತ್ತು ಮುಂದುವರಿಯುತ್ತೇವೆ. ಇದರೊಳಗೆ ಯಾವುದೋ ನಮ್ಮ ವ್ಯಕ್ತಿ ಪ್ರತಿಷ್ಠೆ ಏನೂ ಇಲ್ಲ ಆದರೆ ಎಲ್ಲಾ ವಿವರವನ್ನು ಇಲ್ಲಿ ಚರ್ಚೆ ಮಾಡತಕ್ಕಂಥಾದ್ದು ಸರಿ ಹೋಗಲಾರದು ಎಂದು ನಾನು ಅಷ್ಟೇ ವಿನಂತಿ ಮಾಡುತ್ತೇನೆ. ನಾನು ತಮ್ಮ ಮುಂದೆ ಇವತ್ತು ಒಂದೇ ಒಂದು ಭರವಸೆ ಕೊಡಲಿಕ್ಕೆ ಇಚ್ಛೆಪಡುತ್ತೇನೆ. ಎಲ್ಲಾ ವಿರೋಧ ಪಕ್ಷದ ಮುಖಂಡರುಗಳನ್ನು ಕರೆಯಿಸಿ ನಾನು ಪುನಃ ನನಗೆ ಏನು ಗೊತ್ತಿದೆ ಎನ್ನುವ ಎಲ್ಲಾ ವಿದ್ಯಮಾನಗಳನ್ನು ಅವರ ಮುಂದೆ ಇಡಲಿಕ್ಕೆ ಸಿದ್ಧನಿದ್ದೇನೆ. ಇಷ್ಟನ್ನು ಹೇಳಿ, ರಾಜ್ಯದ ಹಿತಕ್ಕೋಸ್ಕರವಾಗಿ, ಹಿತ ಕಾಪಾಡುವುದನ್ನು ಬಿಟ್ಟು, ರಾಜಕಾರಣಕ್ಕೋಸ್ಕರವಾಗಿ ನಾವು ಯಾರ ಜೊತೆಯಲ್ಲಿ ಬಾಂಧವ್ಯ ಬೆಳೆಸಿಕೊಳ್ಳಬೇಕು, ಎನ್ನತಕ್ಕಂಥಾದ್ದಕ್ಕೆ ಬಹುಶಃ ಯಾರೂ ಹೋಗಲಾರರು ಎಂದು ಭಾವಿಸಿಕೊಳ್ಳುತ್ತೇನೆ. ತಮಿಳುನಾಡಿನ ಮುಖ್ಯಮಂತ್ರಿಗಳು, ಆಂಧ್ರದ ಮುಖ್ಯಮಂತ್ರಿಗಳ ಜೊತೆ ಸಂಬಂಧ ಇಟ್ಟುಕೊಳ್ಳಿಲಿಕ್ಕೆ ಈಗ ಯಡಿಯೂರಪ್ಪನವರ ಪಕ್ಷ ಮಹಾರಾಷ್ಟ್ರದಲ್ಲಿ ಇದೆ. ಆದರೆ ಬೌಂಡರಿ ವಿಷಯ ಬಂದಾಗ ಅವರು ಎದ್ದು ಇಲ್ಲಿ ಖಂಡತುಂಡವಾಗಿ ಹೇಳಲಿಲ್ಲವೇ? ಅವರ ಪಕ್ಷ ಅಲ್ಲಿ ಇದ್ದಾಕ್ಷಣ ಬಿಟ್ಟರೇ ಅವರು? ಇಲ್ಲಿ ಎಲ್ಲರೂ ಒಂದೇ, ಪ್ರತಿಯೊಬ್ಬರಿಗೂ ನಮ್ಮ ರಾಜ್ಯದ ಬೌಂಡರಿ ಬಗ್ಗೆಯಾಗಲಿ, ನದಿ ನೀರಿನ ಬಗ್ಗೆಯಾಗಲಿ, ಯಾರೂ, ಯಾವ ಪಕ್ಷ ಕೂಡ ಅಷ್ಟೊಂದು ತಮ್ಮ ರಾಜ್ಯದ ಹಿತವನ್ನು ಕಡೆಗಾಣಿಸುತ್ತ ಎನ್ನತಕ್ಕಂಥಾದ್ದರ ಬಗ್ಗೆ ನಾನು ಲಘುವಾಗಿ ಕಾಣಲಿಕ್ಕೆ ಸಿದ್ಧವಿಲ್ಲ. ಇಷ್ಟು ಮಾತ್ರ ಹೇಳಲಿಕ್ಕೆ ಇಚ್ಛೆಪಡುತ್ತೇನೆ. ರಾಜಕಾರಣವನ್ನು ಇದರಲ್ಲಿ ಯಾರೂ ಬೆರಸಲಿಕ್ಕೆ ಹೋಗುವುದು ಬೇಕಾಗಿಲ್ಲ. ಅದರ ಅವಶ್ಯಕತೆಯೂ ಇಲ್ಲ. ನಾವೆಲ್ಲರೂ ಒಂದುಗೂಡಿ ಈ ರಾಜ್ಯಕ್ಕೆ ಅದು ಗಡಿ ಸಮಸ್ಯೆ ಇರಲಿ, ನದಿ ಸಮಸ್ಯೆ ಇರಲಿ, ಅದನ್ನು ಕಾಪಾಡಿಕೊಳ್ಳಲಿಕ್ಕೆ ಎಲ್ಲರೂ ಒಂದುಗೂಡಿ ಕೆಲಸ ಮಾಡೋಣ. ಹೇಗೆ ಹಿಂದಿನಿಂದ ನಡೆದು ಕೊಂಡು ಬಂದಿದೆಯೋ ಅದೇ ರೀತಿ ಮುಂದುವರೆಯೋಣ. ಎಲ್ಲದನ್ನೂ, ವಿಶ್ವಾಸಕ್ಕೆ ತೆಗೆದುಕೊಂಡು ಏನು ನಡೆದಿದೆ ಇಲ್ಲಿಯವರೆಗೆ ಅದನ್ನು ಅವರ ಮುಂದೆ, ಅವರ ಗಮನಕ್ಕೆ ತರಲಿಕ್ಕೆ ನಾನು ಆಶ್ವಾಸನೆಯನ್ನು ಕೊಡುತ್ತೇನೆ ಎಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಅಧ್ಯಕ್ಷರ ಅನುಮತಿ ಮೇರೆಗೆ ಪ್ರಸ್ತಾಪಿಸಲಾದ ವಿಷಯಗಳು

ಕರ್ನಾಟಕ ವಿದ್ಯುಚ್ಛಕ್ತಿ ಇಲಾಖೆಯ ಅಧ್ಯಕ್ಷರು ವಿದ್ಯುಚ್ಛಕ್ತಿ ಕಡಿತದ ಬಗ್ಗೆ ನೀಡಿರುವ ಹೇಳಿಕೆ.

+ ಶ್ರೀ ವೈ. ರಾಮಕೃಷ್ಣ (ಅನೇಕಲ್) : ಸನ್ಮಾನ್ಯ ಸಭಾಧ್ಯಕ್ಷರೆ, ಒಂದು ಗಂಭೀರವಾದಂಥ ವಿಚಾರವನ್ನು ಎಲ್ಲಿ ಪ್ರಸ್ತಾಪ ಮಾಡಲಿಕ್ಕೆ ನಾನು ನಿಂತಿದ್ದೇನೆ. ಏನು ವಿಷಯ ಅಂದರೆ ಈ ಸಭೆ ನಡೆಯುವಾಗ ಮತ್ತು ಸಭೆಯಲ್ಲಿ ಸಂಬಂಧಪಟ್ಟಂಥ ಮಂತ್ರಿಗಳು ಹಾಜರು ಇದ್ದಾಗ, ಹೆಡ್ ಕ್ವಾರ್ಟರ್ಸ್‌ನಲ್ಲಿ ಹಾಜರು ಇದ್ದಾಗ, ಸಭೆಯಲ್ಲಿ ಇದ್ದಾಗ ಅವರು ಇಲಾಖೆಗೆ ಸೇರಿದಂಥ, ಕರ್ನಾಟಕ ಎಲೆಕ್ಟ್ರಿಸಿಟ್ ಬೋರ್ಡ್ ಅಲ್ಲಿನ ಅಧ್ಯಕ್ಷರು ಮಾಡಿರತಕ್ಕಂಥ ಒಂದು ಸ್ಟೇಟಮೆಂಟ್. ಇವತ್ತು ಇಂಡಿಯನ್ ಎಕ್ಸಪ್ರೆಸ್ ಪತ್ರಿಕೆಯಲ್ಲಿ ಮುಖಪುಟದಲ್ಲಿ, ಮೊದಲನೆ ಒಂದು ಪ್ರಾಶಸ್ತ್ಯವನ್ನು ಪಡೆದು ಇವತ್ತು ಪ್ರಕಟಣೆಯಾಗಿದೆ.

ಸ್ವಾಮಿ, ಇದರಲ್ಲಿ ನಾಲ್ಕೇ ನಾಲ್ಕು ವಾಕ್ಯಗಳನ್ನು ಓದುವುದಕ್ಕೆ ತಮ್ಮ ಅಪ್ಪಣೆಯನ್ನು ಕೇಳುತ್ತೇನೆ.

"Government sources maintain that the power cut may be effective from September, 15 inview of the legislature session.

Confirming this, KEB Chairman B.S.Patil told Indian Express on Tuesday that the power cut was inevitable as 70% of the total power came from the hydel stations and the remaining 30% from Raichur Thermal Power Station (RTPS) and diesel generators at Yelahanka."

ಇದೇರೀತಿ ಮುಂದು ಹೇಳಿಕೊಂಡು ಹೋಗಿದ್ದಾರೆ. I don't wish to go into merits and demerits of the subject.

ನಾನು ಕೇಳತಕ್ಕಂಥಾದ್ದು ಈ ತರಹ,ಈ ರೀತಿ ಸಭೆ ನಡೆಯುವಾಗ ಸಭೆಯ ಹೊರಗಡೆ ಮಂತ್ರಿಗಳು ಹೇಳಿಕೆ ಮಾಡಬಾರದು ಎಂದು ನಿಯಮಾವಳಿ ಇದೆ. ನಿಯಮಾವಳಿ ಎಂದರೆ ಸಂಪ್ರದಾಯವಿದೆ. ತಾವು ಕೂಡ, ಸಂಬಂಧಪಟ್ಟ ಮಂತ್ರಿಗಳು ಕೂಡ ಮಾಡಬಾರದು. ನಿಯಮಾವಳಿ ಹಾಗೆ ಇರುವಾಗ ತಮ್ಮ ಇಲಾಖೆಗೆ ಸಂಬಂಧಪಟ್ಟಂತೆ ಚೇರ್ಮನ್ನರಿಗೆ ಅಧಿಕಾರ ಎಲ್ಲಿಂದ ಬಂತು? ಇದು ಅಪ್ರೊಪ್ರಿಯೇಟ್ ಅಲ್ಲ. This is impropriety. ಇದು ಸಭೆಯ ಘನತೆಗೆ ಕುಂದು ತರತಕ್ಕಂಥಾದ್ದು. ಅದಕ್ಕೋಸ್ಕರ ಮಾನ್ಯ ಮಂತ್ರಿಗಳನ್ನು ಉದಾಸೀನ ಮಾಡಿ, ಸಭೆಯನ್ನು ನಿರ್ಲಿಕ್ಷಿಸಿ ಮತ್ತು ಸತ್‌ಸಂಪ್ರದಾಯಗಳನ್ನು ಮೀರಿ ಕೊಟ್ಟಿರತಕ್ಕಂಥ ಈ ಒಂದು ಹೇಳಿಕೆ ಏನಿದೆ, ಇದನ್ನು ಸಭೆಯು ಗಂಭೀರವಾಗಿ ಪರಿಗಣಿಸಬೇಕು. ಮತ್ತು ಚೇರ್ಮನ್ನರು ಯಾರು ಈ ಸ್ಟೇಟಮೆಂಟನ್ನು ಮಾಡಿದ್ದಾರೆ. ಅವರಿಂದ ಈ ಸಭೆಯ ಮೂಲಕ ಕ್ಷಮಾಪಣೆಯನ್ನು ಕೇಳಬೇಕೆಂದು ನಾನು ಹೇಳುತ್ತೇನೆ. It is not a breach of privilege, But it is inappropriate. ಪ್ರಿವಿಲೇಜ್ ಆಗಿದ್ದರೆ ನಾವು ಪ್ರಿವಿಲೇಜ್ ಅನ್ನೇ ಮೂವ್ ಮಾಡುತ್ತಿದ್ದೆವು.

ಶ್ರೀ ಹೆಚ್.ಡಿ. ದೇವೇಗೌಡ : ಯಾರ ಕ್ಷಮಾಪಣೆ ಕೇಳಬೇಕು?

ಶ್ರೀ ವೈ. ರಾಮಕೃಷ್ಣ : ಮಂತ್ರಿಗಳು ಇರುವಾಗ ಆ ಅಧಿಕಾರಿ.

Sri. H.D.Deve Gowda : I am very sorry.

ತಾವೇನು ವಿವರಣೆಯನ್ನು ಕೇಳಿದ್ದೀರಿ, ಅದನ್ನು ನಾನು ಕೊಡುತ್ತೇನೆ.

ಶ್ರೀ ವೈ. ರಾಮಕೃಷ್ಣ : ಅವರು ಸ್ಟೇಟಮೆಂಟ್ ಕೊಟ್ಟಿರುವುದು ಅಷ್ಟೇ ಅಲ್ಲ, ರಾತ್ರಿ ಟೆಲಿವಿಷನ್ ಕಾರ್ಯಕ್ರಮದಲ್ಲೂ ಭಾಗವಹಿಸಿದ್ದಾರೆ. ಅದಕ್ಕೋಸ್ಕರವಾಗಿ ಇದು ಈ ಮನೆಯ ಸಂಪ್ರದಾಯವನ್ನು ಮುರಿದಹಾಗೆ ಆಗುತ್ತದೆ. ಇದಕ್ಕೆ ತಕ್ಕದಾದ ಉತ್ತರವನ್ನು ಮಾನ್ಯ ಉಪಮುಖ್ಯಮಂತ್ರಿಗಳು ಕೊಡಬೇಕು.

ಶ್ರೀ ಜೆ.ಹೆಚ್. ಪಟೇಲ್ (ಉಪ ಮುಖ್ಯಮಂತ್ರಿಗಳು) : ನಮ್ಮ ಮನೆಯ ಮಗ ನನ್ನನ್ನು ಕೇಳದೇ ಹೋಗಿ ನೇಗಿಲು ಹೂಡಿದ, ಪೈರಿಗೆ ಹೋಗಿ ಗೊಬ್ಬರ ಹಾಕಿದಾಗ, ಅದನ್ನು ಮನೆಯ ಯಜಮಾನ ಕೇಳಿದ ಹಾಗೆ ಆಯಿತು. ಕರ್ನಾಟಕ ಎಲೆಕ್ಟ್ರಿಸಿಟಿ ಬೋರ್ಡ ನಮ್ಮ ಸರ್ಕಾರದ ಒಂದು ಅಂಗ. ಕರ್ನಾಟಕ ಎಲೆಕ್ಟ್ರಿಸಿಟಿ ಬೋರ್ಡಿಗೆ ಸರ್ಕಾರ ಏನು ಆದೇಶ ಕೊಟ್ಟಿದೆ ಎಂಬುದನ್ನು ಹೇಳುತ್ತೇನೆ. ಈಗ ನಮ್ಮ ಎಲ್ಲಾ ಜಲಾಶಯಗಳಲ್ಲಿ ಪ್ರತಿದಿನ ಎಷ್ಟು ನೀರು ಬರುತ್ತದೆ, ಬಂದ ನೀರಿನ ಆಧಾರದ ಮೇಲೆ ಅಥವಾ ಈಗ ಇರತಕ್ಕಂಥ, ನೀರಿನ ಆಧಾರದಮೇಲೆ ಹೈಡಲ್ ಪ್ರಾಜೆಕ್ಟನಿಂದ ಎಷ್ಟು ಎಲೆಕ್ಟ್ರಿಸಿಟಿಯನ್ನು ಜನರೇಟ್ ಮಾಡುತ್ತಿದ್ದೇವೆ, ಥರ್ಮಲ್ ಪ್ರಾಜೆಕ್ಟ್‌ನಿಂದ ಎಷ್ಟು ಜನರೇಟ್ ಮಾಡುತ್ತಿದ್ದೇವೆ ಎಂದು ಸರ್ಕಾರಕ್ಕೆ ಅವರು ಪ್ರತಿ ನಿತ್ಯ ರಿಪೋರ್ಟ್ ಕೊಡಬೇಕಾಗುತ್ತದೆ. ಅವರು ಪ್ರತಿದಿನ ಬೆಳಿಗ್ಗೆ ಬಂದು ನನಗೆ ರಿಪೋರ್ಟ್ ಕೊಡುತ್ತಾರೆ. ಅದರ ಆಧಾರದ ಮೇಲೆ ನಾವು ಏನು ಹೇಳಿದ್ದೇವೆ ಎಂದರೆ, ಸೆಪ್ಟೆಂಬರ್ 15ನೇ ತಾರೀಖಿಗೆ ಮುಂಚೆ ಮಳೆ ಬರುವ ಸಾಧ್ಯತೆ ಇದೆ. ಬರಲಿಲ್ಲವೆಂದರೆ ಏನು ಮಾಡಬೇಕು, ಏನು ಮಾಡುವುದಕ್ಕೆ ಸಾಧ್ಯವೆಂದು ಸರ್ಕಾರಕ್ಕೆ ಅವರು ಅಡ್ವೈಸ್ ಮಾಡಬೇಕಾಗುತ್ತದೆ. ಏಕೆಂದರೆ ಸಂಪುಟದ ತೀರ್ಮಾನ ಸಿಗದ ಹೊರತು ಯಾವುದೂ ಪಾಲಿಸಿ ಆಗುವುದಿಲ್ಲ. ಇದು ತಮಗೆಲ್ಲ, ಕೊಡತಕ್ಕಂಥ ರಿಪೋರ್ಟು ಅದು ಇಂಡಿಯನ್ ಎಕ್ಸಪ್ರೆಸನಲ್ಲಾದರೂ ಕೊಡಲಿ, ಸಂಯುಕ್ತ ಕರ್ನಾಟಕದಲ್ಲಾದರೂ ಕೊಡಲಿ.

Sri. Y. Ramakrishna : I have not gone into the merits of the case. I am questioning the propriety. ಅದರ ಬಗ್ಗೆ ದಯವಿಟ್ಟು ಮಾತನಾಡಿ.

Mr. SPEAKER : He is trying to answer only the merits regarding the impropriety. He is meeting your point.

ಶ್ರೀ ಜೆ.ಹೆಚ್. ಪಟೇಲ್ : ಈಗ ಕರ್ನಾಟಕ ಪವರ್ ಕಾರ್ಪೋರೇಷನ್ ನಮ್ಮ ಒಂದು ಅಂಗ ಸಂಸ್ಥೆ. ಅವರು ರಾಯಚೂರಿನ 5ನೇ, 6ನೇ ಥರ್ಮಲ್ ಜನರೇಟಿಂಗ್ ಸ್ಟೇಷನಗೆ ಇಂತಹ ಕಡೆಯಿಂದ ಸವಲತ್ತುಗಳನ್ನು ಪಡೆಯುತ್ತೇವೆ. ಇಷ್ಟು ಜನರೇಟ್ ಮಾಡುತ್ತೇವೆ ಎಂದು ಒಂದು ಪಕ್ಷ ಹೇಳಿದರೆ, ನನ್ನನ್ನು ಕೇಳದೇ ಹೇಳಿದಿರಿ ಎಂದು ನಾನು ಕೇಳವಹಾಗಿಲ್ಲ. ಹಾಗೆಯೇ ಕೆ.ಇ.ಬಿ.ಯ ಅದ್ಯ ಕರ್ತವ್ಯ ಇದು. ನಾನು ಹೇಳಿದ್ದೇನೆ, ಇದು ಐದು ಕೋಟಿ ಜನರ ತಿಳುವಳಿಕೆಗೆ ಬರಬೇಕಾದಂಥ ವಿಷಯ. ಇದೇನು ಗುಟ್ಟಾಗಿ ಕೆ.ಇ.ಬಿ. ಅಧ್ಯಕ್ಷರು ನನ್ನ ಹತ್ತಿರ ಬಂದು ಹೇಳುವುದಲ್ಲ. ಇನ್ನು ಹದಿನೈದು ದಿವಸದೊಳಗಾಗಿ ಎಂತಹ ಪರಿಸ್ಥಿತಿ ನಮ್ಮ ರಾಜ್ಯದಲ್ಲಿ ಬರಬಹುದು ಎಂದು ಊಹಿಸುವುದಕ್ಕೂ ಸಾಧ್ಯವಿಲ್ಲ. ಇಷ್ಟೊಂದು ಅಪಾಯದ ಸ್ಥಿತಿಯಲ್ಲಿ ನಾವು ಇದ್ದೇವೆ. ನಾನು ಹೇಳುತ್ತೇನೆ, ಕೇವಲ ಮೂರು ಸ್ಟೇಷನ್‌ಗಳಲ್ಲಿ, ಒಂದು ಲಿಂಗನಮಕ್ಕಿಯಲ್ಲಿ ಎಷ್ಟು ನೀರಿದೆ, ಸೂಪಾದಲ್ಲಿ ಎಷ್ಟು ನೀರಿದೆ, ಮತ್ತು ವರಾಹಿಗೆ ಬರತಕ್ಕಂಥ ಮಾನ್ವಿ ಅಣೆಕಟ್ಟಿನಿಂದ ನೀರು ಬರುವಂಥಾದ್ದು ಈ ಮೂರು ಕಡೆಯಲ್ಲೂ ಇರುವ ಪರಿಸ್ಥಿತಿಯನ್ನು ದಿನವೂ ಬೆಳಿಗ್ಗೆ ಬಂದು ನನಗೆ ಹೇಳುತ್ತಿದ್ದಾರೆ. ನಾನು ಪವರ್ ಬಗ್ಗೆ 30 ಅಥವಾ 31ಕ್ಕೆ ಪ್ರತಿಯೊಂದು ವಿಷಯವನ್ನು ಹೇಳಲೇಬೇಕಲ್ಲಾ? ಅದಕ್ಕೆ ಈಗ ಇರುವ ಪವರ್

ಪೊಸಿಷನ್ ಏನು, ಎವಾಲ್ಯುಯೇಷನ್ ಏನು ಮಾಡಿದ್ದೀರಿ ಎಂದು ಕೇಳಬೇಕಾಗುತ್ತದೆ. ಇವತ್ತೂ ಕೂಡ ಅಧಿಕಾರಿಗಳ ಮೀಟಿಂಗ್ ಇತ್ತು. ತಾವು ಅವರು ಪತ್ರಿಕೆಯಲ್ಲಿ ಏಕೆ ಕೊಟ್ಟರು ಎಂದು ಆಕ್ಷೇಪಣೆ ಮಾಡುತ್ತಿದ್ದೀರಿ. This is a matter which should be known by the people of Karnataka. Don't be too touchy about that. ನಾನು ಹೇಳುತ್ತಿದ್ದೇನೆ, ಅವರು ನನಗೆ ರಿಪೋರ್ಟ್ ಕೊಡದೇ ಈ ರೀತಿ ಹೇಳಿಲ್ಲ. ಕೆ.ಇ.ಬಿ. ಯವರು ಸರ್ಕಾರಕ್ಕೆ ಏನೇನು ವರದಿಯನ್ನು ಕೊಡಬೇಕೋ ಅದನ್ನು ಕೊಟ್ಟಿದ್ದಾರೆ. ಅವರು ಪತ್ರಿಕೆಯಲ್ಲಿ ಈ ತರಹ ಸ್ಥಿತಿ ಇದೆಯೆಂದು ಕೊಟ್ಟರೆ I don't know which provision of the rules prohibits him.

SRI. Y. RAMAKRISHNA : So, you will permit your officers to go to the press.

SRI J.H. PATEL : No.

ಶ್ರೀ ವೈ. ರಾಮಕೃಷ್ಣ : ಇದರ ಮೇಲೆ ತಾವು ರೂಲಿಂಗ್ ಕೊಡಬೇಕು.

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ : ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ಜೆ.ಎಚ್.ಪಟೇಲರು ಹಿರಿಯರು ಇದ್ದೀರಿ, ಅನುಭವಿಗಳು ಇದ್ದೀರಿ, ತರ್ಕಬದ್ಧವಾಗಿ ಯಾವುದೇ ವಿಷಯದ ಬಗ್ಗೆ ಮಾತನಾಡುವ ಶಕ್ತಿಯನ್ನು ಭಗವಂತ ಅವರಿಗೆ ಕೊಟ್ಟಿದ್ದಾನೆ. ಇವತ್ತು ನಮ್ಮದು ಬೇಡಿಕೆ ಏನೆಂದರೆ, ಸದನ ನಡೆಯುತ್ತಿರುವಂಥ ಕಾಲದಲ್ಲಿ, ಮಾನ್ಯ ಮುಖ್ಯಮಂತ್ರಿಗಳು ಆಗಸ್ಟ 15 ರಂದು ಕೆಲವು ಕಾರ್ಯಕ್ರಮಗಳನ್ನು ಘೋಷಣೆ ಮಾಡಬೇಕೆಂದು ಇದ್ದರು. ಆದರೆ ಸದನ ನಡೆಯುತ್ತಾ ಇರುವುದರಿಂದ ಹೊರಗಡೆ ಘೋಷಣೆ ಮಾಡುವುದಿಲ್ಲ, ಒಳಗೆ ಮಾಡುತ್ತೇನೆ ಎಂದು ಅವರು ಮಾಡಲಿಲ್ಲ. ಅದೇರೀತಿ ಇವತ್ತು ವಿದ್ಯುತ್ ಬರ ಏನು ಬಂದಿದೆ, ಯಾವ ಒಂದು ಮಳೆಗಾಲದಲ್ಲಿ 24 ಗಂಟೆಯೂ ವಿದ್ಯುಚ್ಛಕ್ತಿಯನ್ನು ಕೊಡಬೇಕಾಗಿತ್ತು ಅದನ್ನು ಕೊಡುವುದಕ್ಕೆ ಸಾಧ್ಯವಾಗಿಲ್ಲ. ಬೇಸಿಗೆಯಲ್ಲಿ ನೋಡುತ್ತಿದ್ದ ಬರ ಈಗಲೇ ಪ್ರಾರಂಭವಾಗಿದೆ. ಕಳೆದ 15-20 ವರ್ಷಗಳಿಂದ ಪಾಲಿಸಿ ಸ್ಟೇಟಮೆಂಟನ್ನು ನಿಮ್ಮ ಒಬ್ಬ ಅಧಿಕಾರಿ ಹೇಳಿದರೆ ಹೇಗೆ? ಅವರು ಹೇಳಿದ್ದಾರೆ.

"ಸದ್ಯಕ್ಕೆ ಜಲಾಶಯಗಳಲ್ಲಿರುವ ನೀರಿನಿಂದ ಮುಂಗಾರಿನ ವರೆಗೆ ವಿದ್ಯುತ್ ಉತ್ಪಾದನೆ ಸಾಧ್ಯ. ನೀರು ಸರಬರಾಜು ಮಂಡಳಿಗಳನ್ನು ಹೊರತುಪಡಿಸಿದಂತೆ ಉಳಿದೆಲ್ಲಾ ರೀತಿಯ ಬಳಕೆದಾರರ ಮೇಲೂ ವಿದ್ಯುತ್ ಕಡಿತ ಮಾಡಬೇಕೆಂಬುದು ನಮ್ಮ ಸಲಹೆ. ಆದರೆ ಈ ಕುರಿತು ಅಂತಿಮ ನಿರ್ಧಾರ ಸರ್ಕಾರಕ್ಕೆ ಬಿಟ್ಟಿದ್ದು". ಎಂದು ಪಾಟೀಲರು ಹೇಳಿದರು. "ವಿದ್ಯುತ್ ಅಭಾವದ ಬಗ್ಗೆ ನೀರಾವರಿ ಪಂಪುಸೆಟ್ ಪರಿಸ್ಥಿತಿ ಬಗ್ಗೆ ರೈತರಿಗೂ ತಿಳಿಹೇಳಬೇಕು" ಈ ಮಾತನ್ನು ಕೂಡ ಅವರು ಹೇಳುತ್ತಿದ್ದಾರೆ. ನಾನು ಹೇಳುತ್ತೇನೆ, ಇದರಲ್ಲಿ ಮಾನ್ಯ ವಿದ್ಯುಚ್ಛಕ್ತಿ ಮಂತ್ರಿಗಳ ಕರ್ತವ್ಯ ಇತ್ತು. ಈ ರೀತಿಯ ಧಾರುಣ ಸ್ಥಿತಿ ಇರಬೇಕಾದರೆ, ಕಳೆದ 30 ವರ್ಷಗಳಿಂದ ಎಂದೂ ಕಾಣದೇ ಇರುವಂಥ ಭೀಕರ ವಿದ್ಯುತ್ ಬರ

ಇರಬೇಕಾದರೆ ಇದರ ಬಗ್ಗೇ ಚರ್ಚೆ ಮಾಡಿ ಅಥವಾ ಇದನ್ನು ಏನಾದರೂ ಸರಿಪಡಿಸುವುದಕ್ಕೆ ನಾವು ಮಾಡುವ ಸಲಹೆಗಳನ್ನು ಚರ್ಚೆ ಮಾಡುವುದಕ್ಕೆ ನಿಮಗೆ ಅಧಿಕಾರ ಇದೆ. ಅದು ಆಗಬೇಕಾಗಿತ್ತು. ಆದರೆ ಅದಕ್ಕೆ ಮುಂಚೆಯೇ ನಿಮ್ಮ ಅಧಿಕಾರಿ ಹೀಗೇ ಹೇಳುತ್ತಿದ್ದರೆ, ಈ ಸಂಪ್ರದಾಯವನ್ನು ನೀವು ಹಾಕಿಬಿಟ್ಟರೆ ನಾಳೆ ಯಾವುದೇ ಇಲಾಖೆಯ ಅಧಿಕಾರಿಗಳು ಹೀಗೆ ಹೇಳಬಹುದೆಂದು ಆದರೆ ನಾನು ಹೇಳುತ್ತೇನೆ ಈ ಸದನಕ್ಕಿಂತ ಅವರು ದೊಡ್ಡವರಲ್ಲ. 1983ನೇ ಇಸವಿಯಿಂದ ನನ್ನ ಅನುಭವದಲ್ಲಿ ಸದನ ನಡೆಯುವ ಕಾಲದಲ್ಲಿ ಮಂತ್ರಿಗಳು ಹೊರಗಡೆ ಸ್ಟೇಟಮೆಂಟ್ ಕೊಟ್ಟಿದ್ದನ್ನು, ಅವರು ಇಲ್ಲಿ ಹೇಳಿಕೆ ಕೊಡುವ ಕಾಲದಲ್ಲಿ ನಾವು ಆಕ್ಷೇಪಣೆ ಮಾಡಿದ್ದೇವೆ. ಈ ಒಂದು ವಿದ್ಯುತ್ ಬರದ ಬಗ್ಗೆ ಸ್ಟೇಟಮೆಂಟನ್ನು ಬಹಿರಂಗವಾಗಿ ಕೊಡುವ ಅಧಿಕಾರವನ್ನು ಯಾವ ಕಾರಣಕ್ಕೂ ಕೊಟ್ಟಿಲ್ಲ. ಆದರೆ ಅವರು ಇದನ್ನು ಹಾಗೆ ಮಾಡಿರುವುದರಿಂದ ಇದು ಒಂದು ಅಕ್ಷಮ್ಯ ಅಪರಾಧ. ಈ ರೀತಿ ಆಗದಂತೆ ನೋಡಿಕೊಳ್ಳುತ್ತೇನೆ ಎಂದು ನೀವು ಹೇಳಬೇಕಾಗುತ್ತದೆ.

ಶ್ರೀ ಜೆ.ಎಚ್. ಪಟೇಲ್ : ಏಕೆ ಇಷ್ಟು ಅವಸರದಲ್ಲಿ ಜಂಪ್ ಮಾಡುತ್ತಿದ್ದೀರಿ? ಈ ಪವರ್ ಪೊಸಿಷನ್ ಬಗ್ಗೆ ನಿಮ್ಮವಾದ ಇಲ್ಲ. ಈಗ ಅವರು ಹೇಳಿಕೆ ಕೊಟ್ಟಿರುವುದು ಪಾಲಿಸಿ ಮ್ಯಾಟರ್ ಅಲ್ಲ. ಪಾಲಿಸಿ ಯಾವಾಗ ಆಗುತ್ತದೆ, ಎಂದರೆ ಸಂಪುಟದ ತೀರ್ಮಾನವಾಗಿ ಅದು ನಿಮ್ಮ ಎದುರಿಗೆ ಬಂದಾಗ, ನಾನು ಹೇಳಿದಾಗ ಅದು ಪಾಲಿಸಿಯಾಗುತ್ತದೆ. ಈಗ ಒಂದೇ ಒಂದು ಅಪಾದನೆ ಮಾನ್ಯ ರಾಮಕೃಷ್ಣ ಅವರದ್ದು ಏನೆಂದರೆ, ಅವರು ಪ್ರೆಸ್‌ಗೆ ಏಕೆ ಹೋದರು? ಅಷ್ಟರಮಟ್ಟಿಗೆ ನಾನು ಒಪ್ಪಿಕೊಳ್ಳುತ್ತೇನೆ.

ಶ್ರೀ ವೈ. ರಾಮಕೃಷ್ಣ : ಅದನ್ನು ನೀವು ಹೇಳಬಹುದಿತ್ತು ಎಂದು

ಶ್ರೀ ಜೆ.ಹೆಚ್. ಪಟೇಲ್ : ಇನ್ನುಮೇಲೆ ನಮ್ಮ ಅಧಿಕಾರಿಗಳಿಗೆ ಹೇಳುತ್ತೇನ, ನೇರವಾಗಿ ನೀವು ಪ್ರೆಸ್‌ಗೆ ಹೋಗಬೇಡಿ, ನನ್ನ ಹತ್ತಿರ ಬಂದು ಹೇಳಿ ಎಂದು ಹೇಳುತ್ತೇನೆ. ಅವರೂ ಹೋಗಿಲ್ಲ, ಅದು, ಅವರ ಪ್ರೆಸ್ ಸ್ಟೇಟಮೆಂಟ್ ಅಲ್ಲ.

ಶ್ರೀ ಹೆಚ್.ಡಿ. ದೇವೇಗೌಡ : ಸನ್ಮಾನ್ಯ ವಿರೋಧಪಕ್ಷದ ನಾಯಕರಾದ ಯಡಿಯೂರಪ್ಪನವರ ಗಮನಕ್ಕೆ ತರುತ್ತೇನೆ.

"A Contingency plan has been submitted to the Government for approval and a formal announcement will be made before the month end, as any delay in effecting the cut will prove disastrous to the State".

Government sources maintain that the power cut may be effective". ಕಂಟೆಂಜೆನ್ಸಿ ಪ್ಲಾನನ್ನು ಸರ್ಕಾರಕ್ಕೆ ಕಳುಹಿಸಿಕೊಟ್ಟಿರುವುದು, ಅವರೇನೂ ಹೇಳಲಿಲ್ಲ. ಕಂಟೆಂಜೆನ್ಸಿ ಪ್ಲಾನ್ ಕಳುಹಿಸಿಕೊಡುವುದು ನಮ್ಮ ಕೆ.ಇ.ಬಿ.ಯವರ ಜವಾಬ್ದಾರಿ. ನಾವು ಕಂಟೆಂಜೆನ್ಸಿ ಪ್ಲಾನ್ ಕಳುಹಿಸಿದ್ದೇವೆಂದು ಹೇಳಿದ್ದಾರೆಯೇ? ಅದು ಸರ್ಕಾರಕ್ಕೆ ಬಂದಿದೆ, ಅದನ್ನು ಯಾರೋ ಪತ್ರಿಕಾ ಸ್ನೇಹಿತರು ಪತ್ತೆ ಮಾಡಿದ್ದಾರೆ, ಇಂತಹ ವಿಷಯಗಳನ್ನು ಪತ್ತೆ ಹಚ್ಚಿ ಬರೆಯುವುದಕ್ಕೆ ಅವರಿಗೆ ಖುಷಿ. ಆದರೆ, ಇಲ್ಲದ್ದನ್ನು

ಬರೆದಾಗ ನಮಗೆ ತಾಪತ್ರಯವಾಗುತ್ತದೆ. ಕಂಟೆಂಜೆನ್ಸಿ ಪ್ಲಾನ್ ಸರ್ಕಾರಕ್ಕೆ ಬಂದಿದೆ, ಅದನ್ನು, ಅವರು ಹೇಳಿ ಕನಫರ್ಮ ಮಾಡಿಕೊಂಡಿದ್ದಾರೆ.

"Confirming this, KEB Chairman B.S.Patil told Indian Express" Why only Indian Express? ಪ್ರೆಸ್ ಸ್ಟೇಟ್‌ಮೆಂಟ್ ಕೊಡುವ ಹಾಗಿದ್ದರೆ, ಎಲ್ಲರನ್ನೂ ಕರೆದು ಹೇಳುತ್ತಾ ಇದ್ದರು. ಒಂದೇ ಒಂದು ಪತ್ರಿಕೆ, ಇಂಡಿಯನ್ ಎಕ್ಸ್‌ಪ್ರೆಸ್‌ಗೆ ಏಕೆ ಕೊಡುತ್ತಿದ್ದರು? ಇಂಡಿಯನ್ ಎಕ್ಸಪ್ರೆಸ್ ಕರೆಸಪಾಂಡೆಂಟ್, ಕಂಟೆಂಜೆನ್ಸಿ ಪ್ಲಾನ್ ರಾಜ್ಯಸರ್ಕಾರಕ್ಕೆ ಕಳುಹಿಸಿದೆಯೇ ಎಂದು ತಿಳಿದುಕೊಂಡು ಬರೆದಿದ್ದಾರೆ. ಇದೇನೂ ರಹಸ್ಯವಾದ ಡಾಕ್ಯುಮೆಂಟ್ ಅಲ್ಲ. ಸೆಕ್ರೆಟರಿಯವರು ಪ್ರೋಸೀಡ್ ಮಾಡುತ್ತಾರೆ. ನಮ್ಮ ಮುಂದೆ ತರಬೇಕಾಗುತ್ತದೆ.

SRI. B.S. YEDIYURAPPA : B.S.Patil told Indian Express on Tuesday?

ಶ್ರೀ ಹೆಚ್.ಡಿ.ದೇವೇಗೌಡ : ಕಂಟೆಂಜೆನ್ಸಿ ಪ್ಲಾನ್ ಸರ್ಕಾರಕ್ಕೆ ಬಂದಿದೆಯೆಂದು ಅವರು ಎಲ್ಲಿಯೋ ತಿಳಿದುಕೊಂಡಮೇಲೆ ಮತ್ತು ಅವರಿಗೆ ಕನಫರ್ಮ ಮಾಡಿದ ಮೇಲೆ, ಇದನ್ನು ಕನಫರ್ಮ್ ಮಾಡಿದರು ಎಂದು ಹೇಳುತ್ತಾರೆ. ಪ್ರೆಸ್ ಕಾನಫರೆನ್ಸ್ ಕರೆದು ಅವರು ಹೇಳಿಲ್ಲ.

(ಗೊಂದಲ)

MR. SPEAKER : Confirming this ಎಂದು ಹೇಳಿದಾಗ It is a kind of investigative journalism.

ಶ್ರೀ ಜೆ.ಹೆಚ್. ಪಟೇಲ್ : ಅವರು ಪ್ರೆಸ್ ಸ್ಟೇಟಮೆಂಟ್ ಇಷ್ಯೂ ಮಾಡಿಲ್ಲ. ಪ್ರೆಸ್ ಕಾನಫರೆನ್ಸನ್ನೂ ಕರೆದಿಲ್ಲ. ಅವರು ಸರ್ಕಾರಕ್ಕೆ ಏನು ವರದಿ ಕಳುಹಿಸಿದ್ದಾರೆ, ಆದರ ಬಗ್ಗೆ ಯಾರೋ ತಿಳಿದುಕೊಂಡೆ "ಇದು ಹೌದಾ ಎಂದು ಕೇಳಿದ್ದಾರೆ. ಅವರು ಹೌದೂ" ಎಂದು ಹೇಳಿದ್ದಾರೆ ಹೇಳಿಲ್ಲ. It is a public document and this is meant for public only. ನೀವು ಹೇಳುವುದನ್ನು ಅವರು ಏಕೆ ಹೇಳಿದ್ದಾರೆಂದು ನೀವು ಕೇಳುತ್ತಿದ್ದೀರಿ. ಇನ್ನುಮೇಲೆ ಹೇಳುತ್ತೇನೆ, ನೀವು ಏನು ಹೇಳುವುದಿದ್ದರೂ, ನನಗೆ ಹೇಳಿ, ನಾನು ಹೇಳುತ್ತೇನೆಂದು ಹೇಳುತ್ತೇನೆ.

ಅಧ್ಯಕ್ಷರು : ನೀವು ಎಲ್ಲರೂ ಇಂಡಿಯನ್ ಎಕ್ಸಿಪ್ರೆಸ್ ತರಿಸಿ ಓದಿ. "Write up ಬೇರೆ, reporting" ಬೇರೆ ಒಂದು "enquiry" ಬೇರೆ .ಇಲ್ಲಿ ವರದಿಗಾರರು, ವರದಿ ಸಿದ್ಧತೆ ಮಾಡುವ ಸಂದರ್ಭದಲ್ಲಿ, ಅವರಾಗಿ ಅವರೇ ಈ ಮಾಹಿತಿಯನ್ನು ಕಲೆಕ್ಟ ಮಾಡಿ, ಕೆ.ಇ.ಬಿ.ಚೇರ್ಮನ್ನರನ್ನು ಕೇಳುತ್ತಾರೆ. ಅದಕ್ಕೆ ಅವರು "ಹೌದು" ಕಳುಹಿಸಿದ್ದೇವೆಂದು ಹೇಳಿದ್ದಾರೆ. ಕನಫರ್ಮಿಂಗ್ ಎಂದರೆ ಅದನ್ನೇ He had not convened any press conference nor he had issued any press statement.

ಶ್ರೀ ಬಿ.ಎಸ್. ಯಡಿಯೂರಪ್ಪ : ಪರಿಸ್ಥಿತಿ ಎಲ್ಲಿಗೆ ಬಂದಿದೆ ಎಂದರೆ, ತಾವು ತಪ್ಪು ತಿಳಿದುಕೊಳ್ಳದಿದ್ದರೆ ಹೇಳುತ್ತೇನೆ. ಆ ಸ್ಥಾನದಲ್ಲಿ ಕುಳಿತು ಒಂದು ಫೋನ್ ಮಾಡಿ ಯಾವುದಾದರೊಂದು

ಮಾಹಿತಿ ಬೇಕೆಂದರೆ, ಅದನ್ನು ಕೊಡುವುದಕ್ಕೆ ಈ ಅಧಿಕಾರಿ ರೆಡಿ ಇಲ್ಲ. ವಾಸ್ತವಿಕ ಸ್ಥಿತಿ ಬಗ್ಗೆ ಫೋನ್ ಮಾಡಿದರೆ, ಅದನ್ನೂ ಕೊಡುವುದಕ್ಕೆ ರೆಡಿ ಇಲ್ಲ. ಈ ಪರಿಸ್ಥಿತಿ ಇರಬೇಕಾದರೆ, ನಾನು ಹೇಳುತ್ತೇನೆ.

ಅಧ್ಯಕ್ಷರು : ಮಾನ್ಯ ಮೊಯಿಲಿಯವರು ಏನೋ ಹೇಳುವುದಕ್ಕೆ ನಿಂತಿದ್ದಾರೆ, ಆದರಿಂದ, ನನಗೂ ಸ್ವಲ್ಪ ಸಹಾಯವಾಗಬಹುದು ಎನ್ನುವ ಆಸೆ ಇದೆ.

ಶ್ರೀ ಎಂ. ವೀರಪ್ಪಮೊಯಿಲಿ : ಮಾನ್ಯ ಅಧ್ಯಕ್ಷರೇ, ನಾನು ಕೂಡ ಇಂಡಿಯನ್ ಎಕ್ಸಪ್ರೆಸ್ ಮತ್ತು ಕನ್ನಡ ಪ್ರಭಾ ಎರಡನ್ನೂ ಓದಿದ್ದೇನೆ. ಅದರಲ್ಲಿ ಕೆ.ಇ.ಬಿ.ಅಧ್ಯಕ್ಷರು ಪತ್ರಿಕಾ ಗೋಷ್ಠಿ ಕರೆದು ಪ್ರಕಟಣೆ ಮಾಡಿದಹಾಗೆ ನನಗೆ ಕಾಣಲಿಲ್ಲ. ಅಂದರೆ, ಕೆ.ಇ.ಬಿ. ಮಂಡಳಿಯವರು. ನಿರ್ಣಯ ತೆಗೆದುಕೊಂಡಿದ್ದಾರೆ. ಪತ್ರಿಕಾ ವರದಿಗಾರರು ಅದನ್ನು ಪತ್ತೆ ಮಾಡಿದ್ದಾರೆ. Because of their investigative journalism, they found out. ಅದಕ್ಕೆ ಕನಫರ್ಮೇಷನ್ ಕೇಳಿದ್ದಾರೆ. He had no option but to confirm it. He cannot tell lies to the press or anybody. The Board has decided. ಇಲ್ಲದೆ ಇದ್ದರೆ ಸುಳ್ಳು ಹೇಳಿದಹಾಗೆ ಆಗುತ್ತದೆ.

ಆದರೆ, ಪ್ರಶ್ನೆ ಆದಲ್ಲ, ಪ್ರಶ್ನೆ ಇರುವಂತಾದ್ದು, ಬಹಳ ಗಂಭೀರವಾದ ಪರಿಸ್ಥಿತಿ. ತಮಗೆ ಗೊತ್ತಿದೆ. ಸರ್ಕಾರದಲ್ಲಿ ನಮಗೂ ಅನುಭವ ಇದೆ. ಅನೇಕಬಾರಿ ಬೇರೆ ಬೇರೆ ಟೆಕ್ನಿಕಲ್ ಪೀಪಲ್ ಕೆ.ಪಿ.ಸಿ.ಯಲ್ಲಿ, ಅಥವಾ ಕೆ.ಇ.ಬಿ.ಯಲ್ಲಿ ನಿರ್ಣಯ ಮಾಡುತ್ತಾರೆ. ಕೆಲವು ಸಾರಿ ತಪ್ಪು ನಿರ್ಣಯ ಮಾಡಿ ಸರ್ಕಾರಕ್ಕೆ ಕಳುಹಿಸುತ್ತಾರೆ. ಆದ್ದರಿಂದ, ಅವರು ನಿರ್ಣಯ ತೆಗೆದುಕೊಂಡ ಕೂಡಲೇ ತಾವೂ ಕೂಡ 50 ಪರ್ಸೆಂಟ್ ಮಾಡತಕ್ಕಂತಾದ್ದನ್ನು, ಹರಿಬರಿಯಲ್ಲಿ ಮಾಡಬೇಡಿ ಎಂದು ನನ್ನ ಸೂಚನೆ. ಏಕೆಂದರೆ, ಗಂಭೀರವಾದ ಪರಿಸ್ಥಿತಿ ಇರುವುದರಿಂದ, ಸನ್ಮಾನ್ಯ ಅಧ್ಯಕ್ಷರ ಹತ್ತಿರ ಕೇಳಿಕೊಳ್ಳುವುದೇನೆಂದರೆ, ಈ ವಿಚಾರವಾಗಿ ಆದಷ್ಟು ಬೇಗ ಅಂದರೆ ನಾಳೆ ಅಥವಾ ನಾಡಿದ್ದು ಸದನದಲ್ಲಿ ಚರ್ಚೆ ಮಾಡುವುದಕ್ಕೆ ತಾವು ಅವಕಾಶ ಕೊಡಬೇಕು. ಏಕೆಂದರೆ, ಸರ್ಕಾರದಲ್ಲಿ ನಿರ್ಣಯ ತೆಗೆದುಕೊಂಡರೆ, ಜನರು ಹಾಹಾಕಾರ ಬೀಳುತ್ತಾರೆ.

ಶ್ರೀ ಜೆ.ಹೆಚ್. ಪಟೇಲ್ : ೫೦ ಪರ್ಸೆಂಟ್ ಅಥವಾ ಯಾವುದೇ ವಿಷಯವನ್ನು ಸಂಪುಟದಲ್ಲಿ ಸಂಪೂರ್ಣವಾಗಿ ಚರ್ಚೆ ಮಾಡಿದಮೇಲೆ ತಮ್ಮ ಎದುರಿಗೆ ತರುತ್ತೇವೆ.

SRI. M. VEERAPPA MOILY : I am not referring to that. ತಾವು ಸಂಪುಟದಲ್ಲಿ ನಿರ್ಣಯ ಮಾಡಿದಮೇಲೆ, ಬದಲಾವಣೆ ಮಾಡುವುದಕ್ಕಾಗುವುದಿಲ್ಲ.

ಶ್ರೀ ಹೆಚ್.ಡಿ. ದೇವೇಗೌಡ : ನಾವು ನಿರ್ಣಯ ಮಾಡುವುದಕ್ಕೆ ಮುಂಚೆ, ಈ ಸದನದಲ್ಲಿ ಚರ್ಚೆ ಮಾಡಬೇಕೆಂದರೆ, ಸದನದಲ್ಲಿ ಚರ್ಚೆ ಮಾಡುವುದಕ್ಕೆ ಅವಕಾಶ ಮಾಡಿಕೊಡುತ್ತೇವೆ.

ಶ್ರೀ ಎಂ. ವೀರಪ್ಪಮೊಯಿಲಿ : ಇದರಿಂದ ಬಹಳ ದುಷ್ಪರಿಣಾಮಗಳಿವೆ. ಏಕೆಂದರೆ, It may be a correction decision or may not be a correct decision. ಜನರಲ್ಲಿ ಒಂದುರೀತಿಯ ಕಳವಳ ಉಂಟುಮಾಡತಕ್ಕ ವಾತಾವರಣ ಬರುತ್ತಿದೆ. ತಮಗೆ ಗೊತ್ತಿದೆ, ಕೆಲವು ಸಾರಿ, ಅಂದರೆ,

ಮಾನ್ಯ ಗುಂಡೂರಾಯರ ಅವಧಿಯಲ್ಲಿ 100 ಪರ್ಸೆಂಟ್ ಪವರ್ ಕಟ್ ಮಾಡಿ ಎಂದು ಕೆ.ಇ.ಬಿ. ನವರು ಸರ್ಕಾರಕ್ಕೆ ಸಲಹೆ ಕೊಟ್ಟರು. ಮತ್ತೆ ನೋಡುವುದಕ್ಕೆ ಹೋದರೆ, I myself investigated into it. ಅನೇಕಬಾರಿ ನಿರ್ಣಯ ಏನು ಮಾಡುತ್ತಾರೆ, ಒಂದು ವರ್ಷ, ಎರಡು ವರ್ಷ ಬರಗಾಲವೇ ಬರುತ್ತದೆ, ರಿಸರವಾಯರ್‌ನಲ್ಲಿ ನೀರು ಬರುವುದಿಲ್ಲವೆಂದು ಕೆಲವು ಸಾರಿ ಟೆಕ್ನಿಕಲ್ ಎಕ್ಸ್‌ಪರ್ಟ್ಸ್ ಒಪೀನಿಯನ್ ಕೊಡುತ್ತಾರೆ. ಆದ್ದರಿಂದ ಇದರ ಬಗ್ಗೆ ಆದಷ್ಟು ಜಾಗ್ರತೆ, ತುರ್ತಾಗಿ ಇಲ್ಲಿ ಚರ್ಚೆಯಾಗಬೇಕು.

ಶ್ರೀ ಹೆಚ್.ಡಿ. ದೇವೇಗೌಡ : ಸದನದಲ್ಲಿ ಚರ್ಚೆಗೆ ಅವಕಾಶಮಾಡಿಕೊಟ್ಟು, ತಮ್ಮ ಅಭಿಪ್ರಾಯವನ್ನು ಮತ್ತು ಸದನದ ಅಭಿಪ್ರಾಯವನ್ನು ತೆಗೆದುಕೊಂಡು ಆಮೇಲೆ ಸಚಿವಸಂಪುಟದಲ್ಲಿ ನಿರ್ಣಯ ಮಾಡುತ್ತೇವೆ. ಏನಾದರೂ ಮಳೆ ಬರುವುದಕ್ಕೆ ನಾವು ಜಪ ಮಾಡಿಸಬೇಕೆಂದು ಆ ಕಡೆಯಿಂದ ಆದೇಶ ಕೊಡುವುದಾದರೆ, ಅದನ್ನೂ ಮಾಡಿಸುತ್ತೇನೆ.

ಶ್ರೀ ಎಂ. ವೀರಪ್ಪಮೊಯಿಲಿ : ಮಾನ್ಯ ಅಧ್ಯಕ್ಷರೇ, ನಾನು , ಹೇಳಿದಹಾಗೆ, ತಜ್ಞರು, there are people who always declare dooms day. ಆದರೆ, 1-2 ವರ್ಷ ಮಳೆಯೇ ಬರುವುದಿಲ್ಲವೆಂದು ನಿರ್ಣಯ ಮಾಡಿಕೊಂಡು, ನೀರು ದಾಸ್ತಾನು ಮಾಡಿ ಇಡಬೇಕು. ಪವರ್ ಜನರೇಷನ್ ಮಾಡಬಾರದೆಂದು ಹೇಳತಕ್ಕಂಥ ಒಪೀನಿಯನ್ ಕೂಡ ಸರ್ಕಾರಕ್ಕೆ ಬರುವುದನ್ನು ನಾನು ಕಂಡಿದ್ದೇನೆ. ನಮಗೆ ಅನುಭವ ಇದೆ. ಆದ್ದರಿಂದ ಇದರ ಬಗ್ಗೆ ಜಾಗ್ರತೆಯಾಗಿ ನಿರ್ಣಯ ತೆಗೆದುಕೊಳ್ಳಬೇಕಾಗಿದೆ. ಆದಷ್ಟು ಜಾಗ್ರತೆ ಇಲ್ಲಿ ಚರ್ಚೆ ಮಾಡತಕ್ಕಂತಾದ್ದು ಸಾಧು ಎಂದು ಹೇಳುತ್ತೇನೆ.

ಶ್ರೀ ವಾಟಾಳ್ ನಾಗರಾಜ್ : ನಾನು ಇಲ್ಲಿಯವರೆಗೂ ಗಮನಿಸುತ್ತಿದ್ದೆ. ಮುಖ್ಯಮಂತ್ರಿಗಳು ಜಪ ಮಾಡುತ್ತೇವೆಂದು ಹೇಳುತ್ತಿದ್ದಾರೆ, ನಾವು ಜಪ ಮಾಡಬೇಕೆಂದು ಹೇಳಿದಾಗ, ಜಪ ಮಾಡುತ್ತೇವೆಂದು ಹೇಳಿದರು. ನಾವು ಮಾಡಿ ಎಂದು ಹೇಳುತ್ತೇವೆ. ನೀವು ಮತ್ತು ಜೆ.ಹೆಚ್. ಪಟೇಲರು ಇಬ್ಬರೂ ಜಪ ಮಾಡಿ ಎಂದು ಹೇಳುತ್ತೇವೆ. ಮಾಡುತ್ತೀರೋ?

ಶ್ರೀ ಹೆಚ್.ಡಿ. ದೇವೇಗೌಡ : ವಾಟಾಳ್ ನಾಗರಾಜ್ ನೇತೃತ್ವದಲ್ಲಿಯೇ ಮಾಡಿಸೋಣ. ಮಾನ್ಯ ಯಡಿಯೂರಪ್ಪನವರ ಮಾರ್ಗದರ್ಶನವನ್ನೂ ತೆಗೆದುಕೊಳ್ಳುತ್ತೇವೆ. ಮತ್ತು ನಿಮ್ಮ ಮಾರ್ಗದರ್ಶನವನ್ನೂ ತೆಗೆದುಕೊಳ್ಳುತ್ತೇವೆ. ನೀವಿಬ್ಬರೂ ಹೇಳಿದರೆ ಮಾಡಿಸಬಹುದು.

ಶ್ರೀ ವಾಟಾಳ್ ನಾಗರಾಜ್ : ನಿಮ್ಮ ಜೊತೆಯಲ್ಲಿ ಜೆ.ಹೆಚ್.ಪಟೇಲರು ಜಪ ಮಾಡಲು ಕುಳಿತುಕೊಳ್ಳುತ್ತಾರೆಯೇ, ಇದು ಮೊದಲು ತೀರ್ಮಾನವಾಗಲಿ.

ಶ್ರೀ ಜೆ.ಹೆಚ್. ಪಟೇಲ್ : ಎಲ್ಲರೂ ಕುಳಿತುಕೊಳ್ಳಬೇಕೆಂದು ಎಲ್ಲಿದೆ? ನನ್ನ ಪರವಾಗಿ ನಮ್ಮ ನಾಯಕರು ಕುಳಿತುಕೊಳ್ಳುತ್ತಾರೆ. ಜಪ ತಪ, ವ್ರತ ಎಲ್ಲವನ್ನೂ ಅವರೇ ಮಾಡುತ್ತಾರೆ.

ಶ್ರೀ ವಾಟಾಳ್ ನಾಗರಾಜ್ : ನನಗೆ ಗೊತ್ತು ಈ ವಿಚಾರದಲ್ಲಿ, ಈ ಜನ್ಮದಲ್ಲಿ ಪಟೇಲರು ಜಪ ಮಾಡಲು ಕುಳಿತುಕೊಳ್ಳುವುದಕ್ಕೆ ಹೋಗುವುದಿಲ್ಲ.

ಅಧ್ಯಕ್ಷರು : ಅವರು ಮಾಡುತ್ತಾ ಇರುವುದೇ ಜಪ, ನಿಮಗೆ ಗೊತ್ತಿಲ್ಲ, ಅಷ್ಟೆ.

ಶ್ರೀ ವಾಟಾಳ್ ನಾಗರಾಜ್ : ಅವರು ಜಪ ಮಾಡಲು ಕುಳಿತುಕೊಂಡರೆ, ಆ ವಿಚಾರಗಳೇ ಬೇರೆ. ಅಂದರೆ, ಈ ಜಪ ಅಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ : ಖಂಡಿತ ನೀವು ಜಪ ಮಾಡಬೇಡಿ, ಪೂಜೆ ಮಾಡಬೇಡಿ, ಏಕೆಂದರೆ, ಪುಣ್ಯಾತ್ಮರು ನೀವು ಯಾವತ್ತು ಕಾಲಿಟ್ಟರೋ ಅವತ್ತಿನಿಂದ ಮಳೆ ಇಲ್ಲ, ಬರ ಏನೋ ಒಂದುರೀತಿಯ ಗ್ರಹಚಾರ ನಮ್ಮ ರಾಜ್ಯವನ್ನು ಕಾಡುತ್ತಿದೆ. ಅದಕ್ಕೆ ನಾವು ಒಂದು ತರಹ ಯೋಚನೆ ಮಾಡುತ್ತಿದ್ದೇವೆ. ನಮಗೆ ಸ್ವಲ್ಪ ಸಹಾಯ ಮಾಡಿ. ಅಲ್ಲಿ ಪೂಜೆಗೀಜೆ ವ್ಯವಸ್ಥೆಗೆ ನಾವು ಮೈಸೂರಿಗೆ ಹೋಗುತ್ತೇವೆ, ಕಾವೇರಿ ತಾಯಿ ಪೂಜೆ ಮಾಡುತ್ತೇವೆ. ನಾವು ಕಾಲಿಟ್ಟಾಗ ಒಳ್ಳೆಯದಾಗುವುದಾದರೆ, ಅಲ್ಲಿಯ ಪೂಜೆ ವ್ಯವಸ್ಥೆ ನಾವೇ ಮಾಡುತ್ತೇವೆ. ಕಾವೇರಿಮಾತೆಯ ಪೂಜೆ ಮಾಡುವಂಥ ಕಾರ್ಯಕ್ರಮವನ್ನು ನಾವೇ ಇಟ್ಟುಕೊಳ್ಳುತ್ತೇವೆ. ದಯಮಾಡಿ, ನೀವು ಏನಾದರೂ ಮಾಡುವುದಕ್ಕೆ ಹೋದರೆ, ಬೀಳುತ್ತಿರುವ ನಾಲ್ಕು ಹನಿಯೂ ನಿಂತುಹೋಗಿ ಬಿಡಬಹುದು.

ಶ್ರೀ ಜೆ.ಹೆಚ್. ಪಟೇಲ್ : ನೀವು ಎಲ್ಲಿಯಾದರೂ ಹೋದರೆ ಮತ್ತೆ ಭೂಕಂಪ ಆಗಿಬಿಟ್ಟೀತು ಮಹಾರಾಯರೇ. ಅದಕ್ಕೋಸ್ಕರ ನೀವು ಎಲ್ಲೆಲ್ಲೂ ಹೋಗುವುದು ಬೇಡ. ನೀವು ಕಾಲಿಟ್ಟಕಡೆ ಭೂಕಂಪ.

ಶ್ರೀ ವಾಟಾಳ್ ನಾಗರಾಜ್ : ನನಗೆ ಒಂದು ಅನುಮಾನ ಕಾಡುತ್ತಿದೆ.

ಅಧ್ಯಕ್ಷರು : ನೀವು ಹೋದರೆ ಭೂಕಂಪ, ಅವರು ಹೋದರೆ ಬರ. ಬಂಗಾರಪ್ಪನವರು ನಾನೇ ಬರತ್ತೇನೆಂದು ಯೋಚನೆ ಮಾಡುತ್ತಿದ್ದಾರೆ.

ಶ್ರೀ ವಾಟಾಳ್ ನಾಗರಾಜ್ : ಒಂದು ಏನಾಗಿದೆಯೆಂದರೆ, ಮುಖ್ಯಮಂತ್ರಿಗಳು ಅಧಿಕಾರಕ್ಕೆ ಬಂದಮೇಲೆ ಮಳೆ ಬರಲಿಲ್ಲವೆಂದು ಹೇಳಿದರು. ಆದರೆ, ವಿರೋಧಪಕ್ಷದ ನಾಯಕರಾಗಿ ಮಾನ್ಯ ಯಡಿಯೂರಪ್ಪನವರೂ ಬಂದಿದ್ದಾರಲ್ಲಾ ಇವರಿಬ್ಬರೂ ಬಂದಿದ್ದರಿಂದ ಮಳೆ ಬರಲಿಲ್ಲವೆಂದು ನಾವು ತೀರ್ಮಾನ ಮಾಡಬೇಕಾಗಬಹುದು.

ಶ್ರೀ ಬಿ.ಎಸ್. ಯಡಿಯೂರಪ್ಪ : ಈ ಒಂದು ಪರಿಸ್ಥಿತಿಯ ಬಗ್ಗೆ ತಮ್ಮ ಗಮನಕ್ಕೆ ತರುವಂತಹ ಪ್ರಯತ್ನವನ್ನು ರಾಜ್ಯಪಾಲರನ್ನು ಭೇಟಿ ಮಾಡಿ ತಮ್ಮನ್ನು ಭೇಟಿ ಮಾಡಿ ಮೇ ತಿಂಗಳಿಂದ ನಿಮ್ಮನ್ನು ಜಾಗೃತಿ ಮಾಡುವಂತಹ ಕೆಲಸವನ್ನು ಪ್ರಾಮಾಣಿಕವಾಗಿ ನಾವು ಇಲ್ಲಿ ಕುಳಿತು ಮಾಡಿದ್ದೇವೆ. ನನಗೆ ಭಯ ಅಂದರೆ ತಮ್ಮ ಕೆ.ಇ.ಬಿ. ಅಧಿಕಾರಿಗಳ ಹೇಳಿಕೆ ಪ್ರಕಾರ ಬರಗಾಲ ಕಾಡುತ್ತಿರುವಂತಹ ಕಾಲದಲ್ಲಿ ಕೆರೆಕಟ್ಟೆಗಳು ಬತ್ತಿ ಹೋಗಿರುವಂತಹ ಈ ಕಾಲದಲ್ಲಿ ಜಲಾಶಯಗಳಲ್ಲಿ ನೀರು ಇಲ್ಲದೇ ಇರುವಂತಹ ಪಂಪಸೆಟಗಳಿಗೂ ವಿದ್ಯುತ್ ಕಡಿತ ಮಾಡಬಹುದು ಅಂತಹ ಒಂದು ಧಾರುಣ ಸ್ಥಿತಿ ಬರಬಹುದು ಎಂದು ಹೇಳಿದ್ದಾರೆ. ಅಂದರೆ 20 ಪರ್ಸೆಂಟ್ ಬೆಳೆ ಎನ್ನು ಸಿಗುತ್ತಿತ್ತು ಅದೂ ಕೈಬಿಟ್ಟು ಹೋಗಬಹುದು ಎನ್ನುವಂತಹ ಭಯ, ಅವನು ಗೊಬ್ಬರ ಹಾಕಬೇಕೋ ಇಲ್ಲ ಪ್ರಸ್ತಾಪ ಮಾಡಬಾರದಾಗಿತ್ತು.

ಎರಡನೆಯ ಈ ಪರಿಸ್ಥಿತಿ ಇದ್ದರೂ ಸಹ ನೀವೇ ಪಾಲೆಂಟರಿಯಾಗಿ ಈ ಒಂದು ಪರಿಸ್ಥಿತಿಯನ್ನು ಕೆ.ಇ.ಬಿ. ಅಧಿಕಾರಿಗಳು ನನಗೆ ತಿಳಿಸಿದ್ದಾರೆ. ಈ ಕೆಲಸ ಕಾರ್ಯಗಳನ್ನು ನಾನು ಮಾಡಿದ್ದೇನೆ. ಈ ರೀತಿ ಬೇರೆ ಕಡೆಯಿಂದ ವಿದ್ಯುತ್ ತರುವಂಥಾದು ಇರುವಂತಹವಿದ್ಯುತನ್ನು ಉಳಿಸುವಂಥಾದ್ದು, ರೈತರಿಗೆ ಅನುಕೂಲ ಮಾಡಿಕೊಡುವಂಥಾದ್ದು ಏನು ಕಾರ್ಯಕ್ರಮವನ್ನು ರೂಪಿಸಿದ್ದೇವೆ ಇದಕ್ಕೆ ಕಳಕಳಿಯನ್ನು ವ್ಯಕ್ತಪಡಿಸಿ ಇದಕ್ಕೆ ಬೇಕಾದ ಕಾರ್ಯಕ್ರಮಗಳನ್ನು ರೂಪಿಸದೇ ಕೈಕಟ್ಟಿಕೊಂಡು ಕುಳಿತುಕೊಂಡು ಏನೂ ಮಾಡುವುದಕ್ಕೆ ಆಗುವುದಿಲ್ಲ ಯಡಿಯೂರಪ್ಪನವರೇ ಮೇ ತಿಂಗಳಿಂದ ಇನ್ನು ಒಂದು 15 ದಿವಸ ಕಳೆದರೆ ಈ ರಾಜ್ಯ ಕತ್ತಲಾಗುತ್ತದೆ. ಬರ ಬರುತ್ತದೆ ಎಂದು ಹೇಳುವಂಥಾದ್ದೂ ಆದರೆ ಇವತ್ತು ಈ ಬಗ್ಗೆ ತಾವು ಏನೂ ಗಮನ ಕೊಡುತ್ತಿಲ್ಲ ಏನೂ ಕಳಕಳಿ ಇಲ್ಲ ಎಂದು ತಿಳಿದುಕೊಳ್ಳಬೇಕಾಗುತ್ತದೆ. ಬರ ಒಂದು ಕಡೆ ವಿದ್ಯುತ್ ಬರ ಒಂದು ಕಡೆ ಕೆರೆಕಟ್ಟೆಗಳು ಬತ್ತಿ ಹೋಗಿವೆ ಕುಡಿಯುವ ನೀರಿಗೆ ಹಾಹಾಕಾರ

ಈ ಪರಿಸ್ಥಿತಿ ಇರಬೇಕಾದರೆ ನೀವೇ ಒಂದು ಸ್ಟೇಟಮೆಂಟ್ ಮಾಡಿ ಇದರ ಬಗ್ಗೆ ಗಂಭೀವಾದಂತಹ ಚರ್ಚೆಯನ್ನು ಮಾಡುವುದಕ್ಕೆ ಮುಂದೆ ಬರುವಂತಾದ್ದು ಮಾಡದೇ ಇರುವುದು. ಇದು ಅಕ್ಷಮ್ಯ ಅಪರಾಧವಾಗಿದೆ ಇವತ್ತಲ್ಲ ನಾಳೆ ಈ ಕಡೆ ಗಮನ ಕೊಡಿ.

ಶ್ರೀ ಜೆ.ಹೆಚ್. ಪಟೇಲ್ : ಮಾನ್ಯ ಅಧ್ಯಕ್ಷರೆ, ಮಾನ್ಯ ವಿರೋಧಪಕ್ಷದ ನಾಯಕರ ಸಲಹೆ ಸರಿ. ಹೇಳಿ ಇವತ್ತು ನಾನು ದೆಹಲಿಗೆ ಹೋಗುತ್ತಿದ್ದೇನೆ. ನಾಳೆ ವಿದ್ಯುಚ್ಛಕ್ತಿ ಮಂತ್ರಿಗಳನ್ನು ಕಾಣುತ್ತಿದ್ದೇನೆ. ಏತಕೋಸ್ಕರ ಅಂದರೆ, ಇಂತಹ ಪರಿಸ್ಥಿತಿ ಇದೆ ಕೇಂದ್ರ ಸರ್ಕಾರದ ಅನ್ ಅಲೋಕೇಟೆಡ್ ಪವರ್ ಎಂದು ಏನು ಹೇಳುತ್ತಾರೆ, ಯಾವುದೇ ರಾಜ್ಯಕ್ಕೆ ಕೊಡದೇ ಇರುವುದು, ಅದರಲ್ಲಿ ಏನಾದರೂ 200-300 ಮೇಗಾವಾಟ್ಸ ಕೊಡುತ್ತಾರೆ ಎಂದು ಕೇಳಲು, ಈಗ ನಾನು ಅದನ್ನು ಮಾತನಾಡುವುದಕ್ಕೋಸ್ಕರವೇ ಹೋಗುತ್ತಿದ್ದೇನೆ. ನಮಗೆ ಪ್ರತಿ ವರ್ಷ ಕೇಂದ್ರದ ಗ್ರಿಡ್‌ನಿಂದ 600-700 ಮೆಗಾವಾಟ್ಸ ಬರುತ್ತದೆ. ಇನ್ನೊಂದು 300 ಮೆಗಾವಾಟ್ಸ ಕೊಡಲು ಸಾಧ್ಯವೇ ಎಂದು ಕೇಳಲು ಹೋಗುತ್ತಿದ್ದೇನೆ. ನಿನ್ನೆ ನಾನು ಮುಖ್ಯಮಂತ್ರಿಗಳಿಗೂ ಹೇಳಿದ್ದೆ. ಅವರೂ ಮಾತನಾಡಿಬಂದಿದ್ದಾರೆ.

ಶ್ರೀ ಹೆಚ್.ಡಿ. ದೇವೇಗೌಡ : 300 ಮೆಗಾವಾಟ್ಸ ಕೊಡಬೇಕು ಎಂದು ನಾನು ಚರ್ಚೆ ಮಾಡಿ ಬಂದಿದ್ದೇನೆ.

ಶ್ರೀ ಜೆ.ಎಚ್. ಪಟೇಲ್ : ನಾನು ಅದಕ್ಕೆ ಹೋಗುತ್ತಿದ್ದೇನೆ. ನಾಳೆ ಅದು ಏನಾದರೂ ಸಕ್ಸಸ್‌ಫುಲ್ ಆದರೆ ನಾನು ಈ ಸದನಕ್ಕೆ ಬಂದು ಹೇಳುತ್ತೇನೆ. ಈ ಸದನ ಬಿಟ್ಟು ನಾವು ಮಾಡುವುದು ಏನು ಇದೆ.?

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಅಧ್ಯಕ್ಷರೇ, ಈ ತರಹ ಆದರೆ, ಈ ತರಹ ಹೇಳಿಕೆ ಕೊಟ್ಟರೆ ಜನ ಎದೆ ಒಡೆದು ಹೋಗುತ್ತದೆ ಪಟೇಲರೇ, ಈ ತರಹದ ಹೇಳಿಕೆಗಳು ಬರಬಾರದು. ಜನರಿಗೆ ವಿಶ್ವಾಸ ಬರುವಂತಹ ಮಾತುಗಳನ್ನು ಹೇಳಬೇಕು. ಕನ್ನಡ ಪ್ರಭಾದಲ್ಲಿ ಬಂದಿರುವುದನ್ನು ರೈತ ಓದಿದರೆ ಅವನ ಗತಿ ಏನಾಗಬೇಕು? ಸಾಮಾನ್ಯ ಜನರ ಪರಿಸ್ಥಿತಿ ಏನು? ನಿಮ್ಮ ಕೈ ಮೀರಿ ಹೋಗಿದೆ.

ಅಧ್ಯಕ್ಷರು : ಇದನ್ನು ಹೇಗಿದ್ದರೂ ಚರ್ಚೆಗೆ ತೆಗೆದುಕೊಳ್ಳುತ್ತೇವೆ.

ಶ್ರೀ ಕಾಗೋಡು ತಿಮ್ಮಪ್ಪ : ಮಾನ್ಯ ಅಧ್ಯಕ್ಷರೇ, ಮಾನ್ಯ ಯಡಿಯೂರಪ್ಪನವರು ಹೇಳತಕ್ಕಂಥಾದ್ದರಲ್ಲಿ ಒಂದು ಅರ್ಥ ಇದೆ. ಅವರು ಪಂಪಸೆಟ್ ಹಾಕಿರತಕ್ಕಂಥ ರೈತರಿಗೆ ಒಂದು ಎಚ್ಚರಿಕೆಯನ್ನು ಕೊಟ್ಟಿದ್ದಾರೆ. ಯುದ್ಧಕ್ಕೆ ಹೋಗುವಂತಹ ಸಂದರ್ಭದಲ್ಲಿ ಅಪದ್ಧನಿ ಆಗತಕ್ಕಂಥ ಮಾತನ್ನು ಯಾವಾಗಲೂ ಹೇಳಬಾರದು ಸೈನಿಕ. ಅದು ಸರಿಯಲ್ಲ. ಈಗಾಗಲೇ ಕೆಲವು ರೈತರು ಫಸಲನ್ನು ಹಾಕಿಕೊಂಡಿರುತ್ತಾರೆ. ತಮಗೆ ಏನಾದರೂ ಅಂತಹ ಅನಿವಾರ್ಯ ಪ್ರಸಂಗ ಇದೆ ಎಂದು ಕಂಡು ಬಂದಿದ್ದರೆ ಅಂತಹ ಎಚ್ಚರಿಕೆ ಕೊಡತಕ್ಕಂಥ ಮಾತನ್ನು ಯಾವಾಗ ಹೇಳಬೇಕು. ಅಂತಿಮವಾಗಿ ಕೊನೆಯಲ್ಲಿ ಹೇಳಬೇಕು. ಇವತ್ತು ನೀವು ಅಸೆಸಮೆಂಟ್ ಮಾಡುವಂತಹ ಹಂತದಲ್ಲಿ ಇದ್ದೀರಿ. ಸರ್ಕಾರಕ್ಕೆ ವರದಿ ಕೂಡ ಬರತಕ್ಕಂಥಾದ್ದು ಇದೆ, ಈ ಹಂತದಲ್ಲಿ ನೀವು ಈಗಾಗಲೇ ರೈತನ ಎದೆ ಒಡೆಯತಕ್ಕಂಥ ಹೇಳಿಕೆಯನ್ನು ಪತ್ರಿಕೆಯಲ್ಲಿ ಕೊಟ್ಟುಬಿಟ್ಟರೆ ಆ ಜನ ಏನು ಮಾಡಬೇಕು ಅಲ್ಲಿ?

ಶ್ರೀ ಜೆ.ಹೆಚ್. ಪಟೇಲ್ : ಇವತ್ತು ನಾವು ಆಗಸ್ಟ್ 23ನೇ ತಾರೀಖಿನಲ್ಲಿದ್ದೇವೆ. ಸೆಪ್ಟೆಂಬರ್ 15ನೇ ತಾರೀಖಿನೊಳಗೆ ಪರಿಸ್ಥಿತಿ ಸುಧಾರಣೆ ಆಗದೇ ಹೋದರೆ ನಾವು ಬಹಳ ಕಷ್ಟದ ನಿರ್ಧಾರಗಳನ್ನು ತೆಗೆದುಕೊಳ್ಳಬೇಕಾಗುತ್ತದೆ. ಕೆ.ಇ.ಬಿ. ಯವರನ್ನು ಈ ಕೆಲಸ ಎಲ್ಲಾ ಮಾಡಿ ಎಂದು ಹೇಳಿದ್ದೇವೆ. ಯಾವ ಯಾವ ಜಲಾಶಯದಲ್ಲಿ ಎಷ್ಟು ನೀರು ಇದೆ ಎಂಬ ಬಗ್ಗೆ ಎಲ್ಲಾ ವರದಿಗಳನ್ನು ಸದನದಲ್ಲಿ ನಮ್ಮ ಬೇಡಿಕೆ ಇರುವಾಗ ವಿವರಗಳನ್ನು ಕೊಡುತ್ತೇನೆ.

ಶ್ರೀ ಕಾಗೋಡು ತಿಮ್ಮಪ್ಪ : ಅದರಲ್ಲಿ ನಮ್ಮದು ಭಿನ್ನಾಭಿಪ್ರಾಯ ಇಲ್ಲ. ಆ ವರದಿಯಲ್ಲಿ ಪ್ರಸ್ತಾಪ ಮಾಡಿರತಕ್ಕಂಥ ಕೆಲವು ಅಂಶಗಳು ಏನೆಂದರೆ ಇವತ್ತು ವಿದ್ಯುತ್ ಬಳಕೆದಾರರು ಪಂಪಸೆಟ್ ಬಳಕೆದಾರರು ನಾಳೆ ಬೆಳೆಗಳನ್ನು ಹಾಕತಕ್ಕಂಥ ಸಂದರ್ಭದಲ್ಲಿ ಎಚ್ಚರವನ್ನು ವಹಿಸಿಬೇಕು ನಾಳೆ ವಿದ್ಯುತ್ ಕೊಡುವುದಕ್ಕೆ ಆಗುವುದಿಲ್ಲ ಎನ್ನುವಂತಹ ಸ್ಥಿತಿಯಲ್ಲಿದೆ.

ಶ್ರೀ ಜೆ.ಹೆಚ್. ಪಟೇಲ್ : ರೈತರು ಹೇಳಿದ್ದಾರೆ ನೀವು ಏನು ಮಾಡುವುದಾದರೂ ೧೫ ದಿವಸ ಒಂದು ತಿಂಗಳ ಮುಂಚೆ ಹೇಳಿ, ಕೊನೆಗೆ, ನಾವು ಎಲ್ಲಾ ಪಂಪ್‌ಸೆಟ್‌ಗಳನ್ನು ನಿಲ್ಲಿಸಿಬಿಟ್ಟಿದ್ದೇವೆ ಸ್ವಿಚ್ ಆಫ್ ಮಾಡಿಬಿಟ್ಟಿದ್ದೇವೆ ಎಂದು ಹೇಳಬೇಡಿ. ಹಿಂದಿನ ಸರ್ಕಾರಗಳು

ಈ ರೀತಿ ಮಾಡಿವೆ, ಆ ತಪ್ಪನ್ನು ನೀವೂ ಮಾಡಬೇಡಿ ಎಂದು ಹೇಳಿದರು.

ಶ್ರೀ ವಾಟಾಳ್ ನಾಗರಾಜ್ : ತಮಗೆ ರೈತರು ಯಾವಾಗ ಹೇಳಿದರು? ಯಾವ ರೈತರ ಪ್ರತಿನಿಧಿಗಳನ್ನು ತಾವು ಕರೆದಿದ್ದೀರಿ? ಯಾರಜೊತೆಯಲ್ಲಿ ಮಾತನಾಡಿದಿರಿ ಅದನ್ನು ತಾವು ಹೇಳಬೇಕು.

ಶ್ರೀ ಜೆ.ಹೆಚ್. ಪಟೇಲ್ : ನಾನು ಅವರ ಅಡ್ರಸಗಳನ್ನು ಕೊಡುವುದಕ್ಕೆ ಆಗುತ್ತದೆಯೇ? ಒಂದು ಸರ್ಕಾರ ಒಳ್ಳೆಯ ಕೆಲಸ ಮಾಡುವಾಗ ಅದರ ಕಾಲು ಎಳೆಯುವುದಕ್ಕೆ ಹೋಗಬಾರ್ದದು.

ಶ್ರೀ ವಾಟಾಳ್ ನಾಗರಾಜ್ : ನಾವು ಕಾಲು ಎಳೆಯಲಿಲ್ಲ.

ಶ್ರೀ ಜೆ.ಎಚ್. ಪಟೇಲ್ : ಅದನ್ನು ನೀವು ಮಾಡುತ್ತಿದ್ದೀರಿ.

ಶ್ರೀ ವಾಟಾಳ್ ನಾಗರಾಜ್ : ಇಲ್ಲ ಇಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ : ಪಟೇಲರೇ, ತಾವು ಮುಗ್ಗರಿಸಿ ಬೀಳುತ್ತಿದ್ದೀರಿ. ನಾವು ಕಾಲು ಎಳೆಯಲು ಹೋಗಿಲ್ಲ. ಆದ್ದರಿಂದ ನಿಮ್ಮನ್ನು ನಾವು ಎಚ್ಚರಿಸುತ್ತಿದ್ದೇವೆ.

ಅಧ್ಯಕ್ಷರು : ದಯಮಾಡಿ ಈ ವಿಷಯವನ್ನು ಪ್ರತ್ಯೇಕವಾಗಿ ಚರ್ಚೆಗೆ ತೆಗೆದುಕೊಳ್ಳೋಣ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೇ, ನಾವು ಯಾರೂ ಉಪ ಮುಖ್ಯಮಂತ್ರಿಗಳ ಕಾಲು ಎಳೆಯಲು ಹೋಗಿಲ್ಲ. ಒಂದು ಮಾತು ಅವರು ಏನು ಹೇಳಿದರು. ಅಂದರೆ ರೈತರನ್ನು ನಾವು ಕೇಳಿದ್ದೇವೆ. ರೈತರ ಜೊತೆಯಲ್ಲಿ ಮಾತನಾಡಿದ್ದೇವೆ. ಯಾವಾಗ ಮಾತನಾಡಿದಿರಿ ಅಂದರೆ ಅವರು ತಕ್ಷಣ ಸಿಟ್ಟು ಮಾಡಿಕೊಂಡು ಅವರ ಅಡ್ರೆಸ್ ಅಮೇಲೆ ಕೊಡುತ್ತೇನೆ ಅಂದರೆ ಹೇಗೆ? ನೀವು ಆ ಧಾಟಿಯಲ್ಲಿ ಹೊರಟುಬಿಟ್ಟರೆ ನಮ್ಮ ಪರಿಸ್ಥಿತಿ ಹೇಗೆ? ನಾವು ತಮ್ಮಲ್ಲಿ ಮನವಿ ಮಾಡಿಕೊಳ್ಳುತ್ತೇವೆ ಭಯ ಭೀತಿ ಬರತಕ್ಕಂಥ ವಾತಾವರಣ ನಿರ್ಮಾಣ ಆಗಿದೆ. ಆ ವಾತಾವರಣದ ಬಗ್ಗೆ ನಾವು ನಿಮಗೆ ಹೇಳುತ್ತಿರುವುದು, ಅಷ್ಟೇ ಹೊರತು ಅದಕ್ಕೆ ಇನ್ನು 15 ದಿವಸದಿಂದ ನೀವು ಭಯ ಬೀಳಿಸುತ್ತೀರಾ ಇದರಿಂದ.

ಅಧ್ಯಕ್ಷರು : ಈಗ ಮಾನ್ಯ ಖರ್ಗೆಯವರು ಮಾತನಾಡಲಿ.

ಗಣಿಕಾರಿಕೆ ಇಲಾಖೆಯಲ್ಲಿ ನಕಲಿ ಪರವಾನಗಿ

+ ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಗುರುಮಿಠಕಲ್) : ಮಾನ್ಯ ಅಧ್ಯಕ್ಷರೆ, ನಾನು ಒಂದು ವಿಷಯವನ್ನು ಪ್ರಸ್ತಾಪ ಮಾಡಬೇಕು ಎಂದು ಹೇಳಿ ನಾನು ತಮ್ಮನ್ನು ಕೇಳಿಕೊಂಡೆ ತಾವು ಅನುಮತಿಯನ್ನು ಕೊಟ್ಟಿದ್ದೀರಿ ಅದಕ್ಕೆ ನಾನು ತಮ್ಮನ್ನು ಅಭಿನಿಂದಿಸುತ್ತೇನೆ. ವಿಶೇಷವಾಗಿ ಮೈನ್ಸ ಅಂಡ್ ಜಿಯಾಲಜಿ ಡಿಪಾರ್ಟಮೆಂಟನಲ್ಲಿ ಸುಮಾರು 400ಕ್ಕೂ ಹೆಚ್ಚು ಪರ್ಮಿಟ್ಸನ್ನು ಕೊಟ್ಟಿದ್ದಾರೆ. ಅದರಲ್ಲಿ 100 ಫೇಕ್ ಪರ್ಮಿಟ್ಸ ಅನ್ನು ಇಷ್ಯೂ ಮಾಡಿ ಕೋಟ್ಯಾಂತರ ರೂಪಾಯಿಗಳ ಗ್ರಾನೈಟನ್ನು ಇವತ್ತು ಪರಭಾರೆ ಮಾಡಿದ್ದಾರೆ ಎನ್ನತಕ್ಕಂಥದ್ದು ಬಯಲಿಗೆ ಬಂದಿದೆ. ಮತ್ತು ಅದಕ್ಕೆ ಸರ್ಕಾರದವರು ರಕ್ಷಣೆಯನ್ನು ಕೊಟ್ಟಿದ್ದಾರೆ. ಮತ್ತು ಮಂತ್ರಿಗಳು ಕೂಡ ಓರಲ್ ಇನಸ್ಟೆಕ್ಷನ್ಸ ಕೊಡುತ್ತಿದ್ದಾರೆ ಎನ್ನತಕ್ಕಂಥ ಮಾತು ಕೂಡ ಪತ್ರಿಕೆಗಳಲ್ಲಿ ಅಷ್ಟೇ ಅಲ್ಲ ಒಂದು ಸಕ್ಯುಲರ್ ಮುಖಾಂತರ ಕೂಡ ಇವತ್ತಿನ ದಿವಸ ಅದು ಸಿದ್ಧ ಆಗಿದೆ. ಈ ಮಾತನ್ನು ನಾನು ಏತಕ್ಕೆ ಹೇಳುತ್ತಿದ್ದೇನೆ ಅಂದರೆ ಒಂದು ಕಡೆ ಗ್ರಾನೈಟ್ ನಕಲಿ ಪರ್ಮಿಟ್ ಮಾನ್ಯ ಅಧ್ಯಕ್ಷರೇ, ಮಂತ್ರಿಗಳು ಇಲ್ಲ ಅವರನ್ನು ಕರೆಯಿಸಿದರೆ ಬಹಳ ಚೆನ್ನಾಗಿರುತ್ತದೆ. ಏಕೆಂದರೆ ಅವರು ಕೇಳುವಂತಹ ಅವಶ್ಯಕತೆ ಇದೆ. ಮತ್ತು ಅವರು ಉತ್ತರ ಕೊಡಬೇಕು, ಮತ್ತು ಸ್ಟೇಟ್‌ಮೆಂಟ್ ಮೊದಲು ಮಾಡತಕ್ಕಂಥಾದ್ದು ಒಳ್ಳೆಯದು. ಇದು ಬಹಳ ಪ್ರಾಮುಖ್ಯವಾದಂತಹ ವಿಷಯ ಇದೆ. ಸುಮಾರು 100 ನಕಲಿ ಪರ್ಮಿಟ್ಸ್ ಹಾಗೂ 100 ಕೋಟಿ ರೂಪಾಯಿಗಳನ್ನು ಜಪ್ತಿ ಮಾಡಿದ್ದುದು.